ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/231/ಶಿಕಾವೇ/2017-18/ನೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:03.02.2018

***ಇವರಿಗೆ,***
ಜಂಟಿ ನಿರ್ದೇಶಕರು,
ಪ್ರಾದೇಶಿಕ ಕಛೇರಿ,
ಕಾಲೇಜು ಶಿಕ್ಷಣ ಇಲಾಖೆ,
***ಬೆಂಗಳೂರು, ಮೈಸೂರು, ಮಂಗಳೂರು,***
***ಶಿವಮೊಗ್ಗ, ಧಾರವಾಡ, ಕಲಬುರಗಿ.***

ಮಾನ್ಯರೆ,

ವಿಷಯ: ದಿನಾಂಕ:05.02.2018ರಂದು ನಡೆಯಲಿರುವ ಸಚಿವ ಸಂಪುಟದ ಉಪಸಮಿತಿ ಸಭೆಗೆ ಮಾಹಿತಿ ನೀಡುವ ಬಗ್ಗೆ

ಉಲ್ಲೇಖ: (1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ) ಇವರ ಪತ್ರ ಸಂಖ್ಯೆ: ಡಿಸಿಎ (ಸಿಎಸ್‌ಸಿ)/16/2013 ದಿನಾಂಕ:01.02.2018.
(2) ದಿನಾಂಕ:27.01.2018ರ ಈ ಕಛೇರಿಯ ಸಮಸಂಖ್ಯೆ ಪತ್ರ

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ದಿನಾಂಕ:05.02.2018 ರಂದು ನಡೆಯಲಿರುವ ಸಚಿವ ಸಂಪುಟದ ಉಪಸಮಿತಿಯ ಸಭೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಬಿ.ಇಡಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಚರ್ಚಿಸಲು ಕೆಲವೊಂದು ಮಾಹಿತಿಯನ್ನು ಒದಗಿಸಲು ಕೋರಲಾಗಿದೆ.

ಈ ಸಂಬಂಧ ತಮ್ಮ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಅನುದಾನರಹಿತ ಬಿ.ಇಡಿ ಕಾಲೇಜುಗಳ ಮಾಹಿತಿಯನ್ನು ಪ್ರಾಂಶುಪಾಲರುಗಳು ಕೂಡಲೇ ಇಲಾಖೆಯ ವೆಬ್‌ಸೈಟ್‌ನಲ್ಲಿ ನೀಡಿರುವ ನಮೂನೆಯಲ್ಲಿ ಭರ್ತಿ ಮಾಡುವಂತೆ ಉಲ್ಲೇಖ (2)ರ ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ ಪ್ರಾಂಶುಪಾಲರುಗಳು ಭರ್ತಿ ಮಾಡಿರುವ ಮಾಹಿತಿಯಲ್ಲಿ, ಕಾಲೇಜು ಪ್ರಾರಂಭವಾದ ವರ್ಷವನ್ನು ದಾಖಲಿಸುವ ಬದಲು ಆಡಳಿತ ಮಂಡಳಿಯ ಸಂಸ್ಥೆ ಪ್ರಾರಂಭವಾದ ವರ್ಷವನ್ನು ಭರ್ತಿ ಮಾಡಿ ಸಲ್ಲಿಸಿರುತ್ತಾರೆ. ಇದರಿಂದಾಗಿ ಕಾಲೇಜನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ.

ಆದ್ದರಿಂದ, ಅನುದಾನರಹಿತ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳು ಕಾಲೇಜು ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ನಮೂನೆಯಲ್ಲಿ ದಿನಾಂಕ:04.02.2018ರ ಒಳಗಾಗಿ ತಪ್ಪದೇ ಕಾಲೇಜಿನ ಹೆಸರು, ಸ್ಥಳ ಹಾಗೂ ಕಾಲೇಜು ಪ್ರಾರಂಭವಾದ ವರ್ಷದ ಬಗ್ಗೆ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವಂತೆ ಸೂಚಿಸಲಾಗಿದೆ. ಮಾಹಿತಿಯನ್ನು ದಿನಾಂಕ:05.02.2018 ರಂದು ನಡೆಯುವ **ಸಚಿವ ಸಂಪುಟ ಸಭೆಗೆ** ನೀಡಬೇಕಾಗಿರುವುದರಿಂದ ಇದನ್ನು ಆದ್ಯತೆ ಮೇರೆಗೆ ಪರಿಗಣಿಸುವುದು.

ತಮ್ಮ ವಿಶ್ವಾಸಿ,

ಇಲಾಖಾ ವೆಬ್‌ಸೈಟ್:- www.dce.kar.nic.in

ಕಾಲೇಜು ಶಿಕ್ಷಣ ನಿರ್ದೇಶಕರು

**ಪ್ರತಿಯನ್ನು:**

1. **ಸಂಬಂಧಪಟ್ಟ ಎಲ್ಲಾ ಅನುದಾನರಹಿತ ಬಿ.ಇಡಿ ಕಾಲೇಜಿನ ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ**
2. **ಕಛೇರಿ ಪ್ರತಿ.**